ಬೇಗಾನೇ ಆಯ್ತು' ಎಂದು ನಾಚಿಕೊಂಡರು.

ನೂರನೆಯ ಸಿನಿಮಾದ್ದಿರಲಿ, ಮೊದಲನೇ ಸಿನಿಮಾದ ಬಗ್ಗೆ ಹೇಳಿ ಎಂದಾಗ ಚಿಕ್ಕಣ್ಣ 'ಕಿರಾತಕ' ಚಿತ್ರದಲ್ಲಿ ಅವಕಾಶ ಸಿಕ್ಕಿದ್ದನ್ನು ನೆನಪಿಸಿಕೊಂಡರು. ಕನ್ನಡ ಚಿತ್ರೋದ್ಯಮದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಚಿಕ್ಕಣ್ಣ ಅಂಡ್ ಟೀಮ್ ಮಾಡಿದ್ದ ಕಾಮಿಡಿ ಸ್ಕಿಟ್ ನಟ ಯಶ್ ಅವರಿಗೆ ಇಷ್ಟವಾಗಿತ್ತು. ಆ ಮೆಚ್ಚುಗೆಯೇ 'ಕಿರಾತಕ' ಚಿತ್ರಕ್ಕೆ ಬುಲಾವ್ ಬರಲು ಕಾರಣವಾಯಿತು. ''ಅದಕ್ಕೂ ಮೊದಲು ಉದಯ ಟೀವಿಯಲ್ಲಿ ಆ್ಯಂಕರಿಂಗ್ ಮಾಡ್ತಿದ್ದೆ. ಕಾಮಿಡಿ ಕಿಲಾಡಿಗಳು ಷೋನಲ್ಲಿ ಮಾಡ್ತಿದ್ದೆ. ಕಾಮಿಡಿ ಸ್ಟೇಜ್ ಷೋ ಮಾಡ್ತಿದ್ದೆ'' ಎಂದು ಏಳು ವರ್ಷಗಳ ಹಿಂದಿನ ದಿನಗಳನ್ನು ಮೆಲುಕು ಹಾಕಿದರು.

ಊರಿನ ಬಗ್ಗೆ ಹೇಳಿ ಎಂದರೆ, ಚಿಕ್ಕಣ್ಣ ಅವರ ನೆನಪು ಒಮ್ಮೆಗೇ ಬೆಂಗಳೂರಿನಿಂದ ಮೈಸೂರಿಗೆ ಜಿಗಿಯಿತು. ಮೈಸೂರಿನ ಬಲ್ಲಹಳ್ಳಿ ಯಲ್ಲಿ (ಬೋಗಾದಿ ಪಕ್ಕದ್ದು) ಅವರು ಹುಟ್ಟಿ ಬೆಳೆದದ್ದು. ''1986 ಹುಟ್ಟಿದ ವರ್ಷ. ಅದೂ ಕನ್ಫರ್ಮ್ ಇಲ್ಲ. ಕಿವಿ ಮುಟ್ಟಿಬಿಟ್ಟು ಸ್ಕೂಲಿಗೆ ಸೇರ್ಕೊಂಡೋರು ನಾವು. ಹುಟ್ಟಿದ ದಿನ ಎಲ್ಲ ಗೊತ್ತಿಲ್ಲ. ಸ್ಕೂಲಲ್ಲಿ ಬರಕೊಂಡಿರೋದಕ್ಕೆ ಹೂಂ ಎನ್ನಬೇಕು ಅಷ್ಟೇ'' ಎಂದು ನಕ್ಕರು.

''ಬನುಮಯ್ಯ ಕಾಲೇಜಿನಲ್ಲಿ ಮೊದಲ ವರ್ಷದ ಪಿಯುಸಿ ಆಯ್ತು. ಎರಡನೇ ವರ್ಷಕ್ಕೆ ಹೋಗಲೇ ಇಲ್ಲ. ನಾವೆಲ್ಲ ಆರ್ಟ್ಸ್! ಏನೇನೋ ಸಮಸ್ಯೆಗಳು. ಓದಲಿಕ್ಕೆ ಅಷ್ಟೊಂದು ಆಸಕ್ತಿ ಇರಲಿಲ್ಲ. ಕಾಲೇಜಿಗೆ ಹೋಗಲಿಲ್ಲ. ಮೈಸೂರಿನಲ್ಲಿ ಒಂದು ಕಾಮಿಡಿ ಟ್ರೂಪ್ ಇತ್ತು. ರಾಜ್ಯೋತ್ಸವ ಸೇರಿದಂತೆ ಬೇರೆ ಬೇರೆ ಸಂದರ್ಭಗಳಲ್ಲಿ ಷೋ ಮಾಡ್ತಿದ್ದರು. ಆ ಟ್ರೂಪ್ ಸೇರಿಕೊಂಡೆ.

ನಮ್ಮೂರ ಹಬ್ಬಕ್ಕೆ ಒಂದು ಸಾಮಾಜಿಕ ನಾಟಕ ಮಾಡಿದೆವು. ಶ್ರೀಹರಿ ಎನ್ನುವವರು ನಾಟಕದ ನಿರ್ದೇಶಕರು. ನಾಟಕದಲ್ಲಿನ ಅಭಿನಯ ಮೆಚ್ಚಿಕೊಂಡು ದೃಶ್ಯ ಕಲಾವೇದಿಕೆ ಯವರು ಸೇರಿಸಿಕೊಂಡರು. ಆನಂತರ ನಾಗರಾಜ ಕೋಟೆ ಅವರ ಗರಡಿ ಸೇರಿಕೊಂಡೆ. ಆಮೇಲೆ ಬೆಂಗಳೂರು ಸೇರಿಕೊಂಡೆ'' ಎಂದರು.

ಸ್ಟೇಜ್ ಹತ್ತಿದ್ದೇನೋ ಸರಿ, ಹಾಸ್ಯದ ನಂಟು ಕುದುರಿದ್ದು ಹೇಗೆ.. ಎಂದು ಕೇಳಿದರೆ, ಚಿಕ್ಕಣ್ಣ ತಮ್ಮ ನನಸಾಗದ ಕನಸೊಂದನ್ನು ಹೇಳಿಕೊಳ್ಳುತ್ತ ನಿಟ್ಟುಸಿರುಬಿಟ್ಟರು. ''ಕಾಮಿಡಿಯನ್ ಆಗಬೇಕು ಅಂದುಕೊಂಡಿರಲಿಲ್ಲ. ನನಗೆ ಆಸೆ–ಆಸಕ್ತಿ ಇದ್ದುದು ವಿಲನ್ ಆಗುವುದರಲ್ಲಿ. ಕಾಮಿಡಿಯನ್ ಹೇಗಾದೆ ಎಂದು ಕೇಳಿದರೆ ನನಗೆ ಹೇಳಲು ಗೊತ್ತಿಲ್ಲ. ಆ್ಯಕ್ಟ್ ಮಾಡಬೇಕು ಅಂತಿತ್ತು. ನೆಗೆಟಿವ್ ಕ್ಯಾರೆಕ್ಟರ್ ಮಾಡುವ ಆಸೆಯಿತ್ತು.

ಆದರೆ, ಊರಲ್ಲಿ ನಾಟಕ ಮಾಡಿದಾಗ ನಮ್ಮ ಹುಡುಗರು ನನ್ನನ್ನು ಸೆಲೆಕ್ಟ್ ಮಾಡಿದ್ದು ಕಾಮಿಡಿ ಕ್ಯಾರೆಕ್ಟರ್‌ಗೆ. 'ನೀನು ಕಾಮಿಡಿ ಕ್ಯಾರೆಕ್ಟರೇ ಮಾಡು' ಎಂದರು. ಆಯ್ತು ಎಂದು ಒಪ್ಪಿಕೊಂಡೆ. ಅಲ್ಲಿಂದ ದೊರೆತದ್ದೆಲ್ಲ ಕಾಮಿಡಿ ಕಾಮಿಡಿಯೇ'' ಎಂದರು.

''ಹೂಮಾಲೆ ಎನ್ನುವ ಟೆಲಿಫಿಲ್ಮ್ ನಲ್ಲಿ ಎರಡು ಎಪಿಸೋಡ್ ಮಾಡಿದೆ. ಉದಯ ಟೀವಿಯ ಕುರಿಗಳು ಷೋನಲ್ಲಿ ಹತ್ತು ಎಪಿಸೋಡ್ ಮಾಡಿದೆ. ಆಮೇಲೆ ಅವರು ಕರೆಯಲಿಲ್ಲ. ಫೈನಲ್ ಕಟ್‌ನ 'ಪಾಪ ಪಾಂಡು', 'ಸಿಲ್ಲಿ ಲಲ್ಲಿ'ಯಲ್ಲೂ ಮಾಡಿದೆ. ತಿಂಗಳಿಗೋ ಎರಡು ತಿಂಗಳಿಗೂ ಒಮ್ಮೆ ಮಾಡುತ್ತಿದ್ದೆ'' ಎಂದು ಚಿಕ್ಕಣ್ಣ ಕಿರುತೆರೆಯ ದಿನಗಳನ್ನು ನೆನಪಿಸಿಕೊಂಡರು.



'ಪಾಪ ಪಾಂಡು', 'ಸಿಲ್ಲಿ ಲಲ್ಲಿ' ಸೀರಿಯಲ್‌ಗಳಲ್ಲಿ ಚಿಕ್ಕಣ್ಣನವರಾ? ಅವರು ಮಾಡಿದ್ದು ಯಾವ ಪಾತ್ರ? ಎಂಬ ನಮ್ಮ ಅನುಮಾನ ಪರಿಹರಿಸುವಂತೆ, 'ಹಾಂ... ಗೊತ್ತಾಗಲ್ಲ... ನಾನೇ ಅಂತ' ಎಂದು ನಾಚಿಕೊಂಡರು. 'ಅಯ್ಯೊ...ಭಿಕ್ಷುಕ ಅಥವಾ ಕಳ್ಳನ ಪಾತ್ರಗಳಿದ್ದಾಗೆಲ್ಲ ಕರೀತಿದ್ರು ಸಾರ್. ಈಗ ನೋಡಿದ್ರೆ ನಂಗೂ ಗುರ್ತ ಸಿಗಲ್ಲ..' ಎಂದು ಮತ್ತೆ ನಕ್ಕರು.

ವಿಲನ್ ಮಾಡುವ ಚಿಕ್ಕಣ್ಣನವರ ಆಸೆಯಿತ್ತಲ್ಲ; ಅದು ಶಿವಮಣಿ ನಿರ್ದೇಶನದ 'ಕ್ಲಾಸ್‌ಮೇಟ್ಸ್' ಹಾಗೂ ಕವಿತಾ ಲಂಕೇಶ್ ನಿರ್ದೇಶನದ 'ಶ್ರೀಮತಿ' ಸೀರಿಯಲ್‌ಗಳಲ್ಲಿ ಸ್ವಲ್ಪ ಮಟ್ಟಿಗೆ ನೆರವೇರಿತು. ಎರಡೂ ಸೀರಿಯಲ್‌ಗಳಲ್ಲಿ ಅವರು ನೆಗೆಟಿವ್ ರೋಲ್‌ಗಳಲ್ಲಿ ನಟಿಸಿದರು. ಆದರೆ, ಅವರ ಪ್ರಯತ್ನ ಚಿತ್ರರಂಗದ ಯಾರ ಗಮನವನ್ನೂ ಸೆಳೆಯಲಿಲ್ಲ.

''ರಿಯಾಲಿಟಿ ಷೋಗಳಲ್ಲಿ ನಾವು ಮಾಡ್ತಿದ್ದ ಕಾನ್ಸೆಪ್ಟ್‌ಗಳೆಲ್ಲ ನಮ್ಮವೇ. ಕಾಮಿಡಿ ಕಿಲಾಡಿಗಳಲ್ಲಿ 50–60 ಸ್ಕ್ರಿಪ್ಟ್ ಮಾಡಿದ್ದೇವೆ. ನಾನು ಮತ್ತು ಕುರಿ ಪ್ರತಾಪ್ ಸೇರಿಕೊಂಡು ಏನು ಮಾಡಬೇಕು ಅನ್ನೋದು ಮಾತನಾಡುತ್ತಿದ್ದೆವು. ಬರೆಯೋದು ಗಿರಿಯೋದೆಲ್ಲ ನಮಗೆ ಅಭ್ಯಾಸ ಇಲ್ಲ. ಚಾನಲ್ನೋರು ಕೂಡ ಈಗಿನಂತೆ ಆಗ ರೈಟರ್‌ಗಳನ್ನು ಕೊಡ್ತಿರಲಿಲ್ಲ. ದೃಶ್ಯ ಕಲಾವೇದಿಕೆಯಲ್ಲಿ ಪ್ರತಾಪ್ ಕೂಡ ಇದ್ದ. ನಮ್ಮಿಬ್ಬರ ಕೆಮಿಸ್ಟ್ರಿ ಆಗಿನಿಂದ ಚೆನ್ನಾಗಿತ್ತು. ಟೀವಿಯಲ್ಲೂ ಅದು ಅನುಕೂಲ ಆಯ್ತು.''

ಹೀಗೆ ಟೀವಿ ಮತ್ತು ಸ್ಟೇಜ್ ಷೋಗಳಲ್ಲಿ ತೊಡಗಿಕೊಂಡಿದ್ದ ಚಿಕ್ಕಣ್ಣ 'ಕಿರಾತಕ' ಚಿತ್ರದ ಮೂಲಕ ಬೆಳ್ಳಿತೆರೆಗೆ ಬಂದದ್ದು ಈಗ ಇತಿಹಾಸ. ಆದರೆ, 'ಕಿರಾತಕ' ಚಿತ್ರದ ಬಗ್ಗೆ ಆಗ ಚಿಕ್ಕಣ್ಣನವರಲ್ಲಿ ಸಿಕ್ಕಾಪಟ್ಟೆ ಉತ್ಸಾಹವೇನೂ ಇರಲಿಲ್ಲ. ''ಆಗ ನನಗೆ ಅಷ್ಟೇನೂ ಆಸಕ್ತಿಯಿರಲಿಲ್ಲ. ಹೊಸಬರು ಅಂದ್ರೆ ದುಡ್ಡಿರಲ್ಲ. ಸಿನಿಮಾದಲ್ಲಿ ನಾವೆಲ್ಲ ಸ್ಟ್ಯಾಂಡ್ ಆಗಲಿಕ್ಕೆ ಸಾಧ್ಯವೇ ಇಲ್ಲ ಎನ್ನುವ ಮನಸ್ಥಿತಿ ಇತ್ತು. ಅಲ್ಲದೆ ಸ್ಟೇಜ್ ಷೋ, ರಿಯಾಲಿಟಿ ಷೋಗಳಲ್ಲಿ ಒಳ್ಳೇ ಸಂಪಾದನೆಯೂ ಇತ್ತು. ಆ ಕಾಲದಲ್ಲೇ ಸ್ಟೇಜ್‌ನಲ್ಲಿ ದಿನಕ್ಕೆ 10 ಸಾವಿರ ರುಪಾಯಿ ದುಡೀತಿದ್ವಿ. ಯಶ್ ಬೇಜಾರು ಮಾಡಿಕೊಳ್ತಾರೆ ಅನ್ನುವ ಕಾರಣಕ್ಕಾಗಿ 'ಕಿರಾತಕ' ಒಪ್ಪಿಕೊಂಡೆ. ಅದರಿಂದ ನನಗೆ ಆಗ ಏನೂ ಉಪಯೋಗ ಆಗಲಿಲ್ಲ. ಈಗ ಎಲ್ಲರೂ 'ಕಿರಾತಕ' ಚೆನ್ನಾಗಿದೆ ಅಂತಾರೆ. ಆಗ ನಾನು ಯಾರು ಅನ್ನೋದು ಯಾರಿಗೂ ಗೊತ್ತಿರಲಿಲ್ಲವಲ್ಲ. ಹಾಗಾಗಿ ಏನೂ ಉಪಯೋಗವಾಗಲಿಲ್ಲ. 'ಕಿರಾತಕ' ಚಿತ್ರದಲ್ಲಿ ಅಭಿನಯಿಸಿದ ನಂತರ ಒಂದು ವರ್ಷ ಬೇರೆ ಯಾವ ಸಿನಿಮಾದಲ್ಲೂ ಅವಕಾಶ ಸಿಗಲಿಲ್ಲ.''

'ಕಿರಾತಕ' ನಂತರ ಚಿಕ್ಕಣ್ಣ ಅಭಿನಯಿಸಿದ ಒಂದೆರಡು ಸಿನಿಮಾಗಳಲ್ಲಿ ಯಾವುದೂ ಗೆಲ್ಲಲಿಲ್ಲ. ಮತ್ತೆ ಅವರ ಕೈ ಹಿಡಿದದ್ದು ಯಶ್ ಜೊತೆಗಿನ 'ರಾಜಾಹುಲಿ' ಚಿತ್ರ.

''ರಾಜಾಹುಲಿ ಚೆನ್ನಾಗಿ ಹೋಯ್ತು. ಅದು ನಂಗೆ ಟರ್ನಿಂಗ್ ಪಾಯಿಂಟ್. ಅದಾದ